ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 09–09–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕದಲ್ಲಿ ಕೃಷಿ ಅರಣ್ಯ : ಅವಕಾಶಗಳು ಹಾಗೂ ಆಡಚಣೆಗಳು ರಾಜ್ಯ ಮಟ್ಟದ ವಿಚಾರಸಂಕಿರಣ:<br><br>ಉದ್ಘಾಟನೆ:<br><br>ಬಿ. ರಮಾನಾಥ್ ರೈ,<br>ಅರಣ್ಯ, ಪರಿಸರ ಸಚಿವರು<br><br>ಮುಖ್ಯ ಅತಿಥಿ:<br><br>ಟಿ. ಬಿ. ಜಯಚಂದ್ರ,<br>ಕಾನೂನು ಹಾಗೂ ಪಶುಸಂಗೋಪನಾ ಸಚಿವರು.<br><br>ಅಧ್ಯಕ್ಷತೆ:<br><br>ಎ.ಎಸ್. ಸದಾಶಿವಯ್ಯ,<br>ಅಧ್ಯಕ್ಷರು,<br>ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು.<br><br>ವಿಶೇಷ ಆಹ್ವಾನಿತರು.<br><br>ಎಂ. ಮದನ್‌ಗೋಪಾಲ್, | 10–09–2015<br><br>ಗುರುವಾರ<br>ಬೆಳಿಗ್ಗೆ<br>10–00 ಗಂಟೆಗೆ | ಸಭಾಂಗಣ, ಹಳೆಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು – 560 024. |

| | | | |
|---|---|---|---|
| | ಅಪರ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಹಾಗೂ ಪರಿಸರ ಇಲಾಖೆ. | | |
| 2. | ಪತ್ರಿಕಾಗೋಷ್ಠಿ:<br><br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು.<br>ಸಂಪರ್ಕ: ಡಾ. ಎಂ.ಎಸ್. ಸಂಗಪುರ, ಆಯೋಗದ ಕಾರ್ಯದರ್ಶಿಗಳು<br><br>ದೂರವಾಣಿ 080 – 2224 0445/6 | 10–09–2015<br><br>ಗುರುವಾರ<br>ಬೆಳಿಗ್ಗೆ<br>11–00 ಗಂಟೆಗೆ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕಚೇರಿ, ನಾಲ್ಕನೇ ಮುಖ್ಯರಸ್ತೆ, 16 ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು – 560 027. |

## ಪತ್ರಿಕಾ ಪ್ರಕಟಣೆ

## 8ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಮಿತಿ ರಚನೆ : ಮುಖ್ಯಮಂತ್ರಿ – ಅಧ್ಯಕ್ಷತೆ

ಬೆಂಗಳೂರು, ಸೆಪ್ಟೆಂಬರ್ 9 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಏರ್ಪಡಿಸುವ 8ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ – 2015 ಕ್ಕೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಘಟನಾ ಸಮಿತಿ ರಚಿಸಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಈ ಸಂಘಟನಾ ಸಮಿತಿಯಲ್ಲಿ ಮುಖ್ಯಮಂತ್ರಿಗಳು ಗೌರವಾಧ್ಯಕ್ಷರಾಗಿದ್ದು, ರಾಜ್ಯ ವಾರ್ತಾ ಇಲಾಖೆ, ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಖಾತೆಯ ಸಚಿವರು ಕಾರ್ಯಾಧ್ಯಕ್ಷರಾಗಿದ್ದಾರೆ.

ಸಂಘಟನಾ ಸಮಿತಿಯಲ್ಲಿ ಒಟ್ಟು 14 ಸದಸ್ಯರಿದ್ದಾರೆ. ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿಗಳು, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರು, ವಿಧಾನ ಪರಿಷತ್ ಸದಸ್ಯರಾದ ಜಯಮಾಲ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು, ಚಲನಚಿತ್ರ ನಿರ್ದೇಶಕರಾದ ಡಾ. ಗಿರೀಶ್ ಕಾಸರವಳ್ಳಿ, ಟಿ.ಎಸ್. ನಾಗಭರಣ, ರೈಲ್ವೇ ಎ.ಡಿ.ಜಿ.ಪಿ. ಆರ್.ಪಿ. ಶರ್ಮಾ, ಚಲನಚಿತ್ರ ಕಲಾವಿದೆ ಕುಮಾರಿ ರಾಧಿಕಾ ಪಂಡಿತ್, ಪತ್ರಕರ್ತರ ಎನ್. ವಿಶಾಖ, ಕೇಂದ್ರ ಸೆನ್ಸಾರ್ ಮಂಡಳಿ ಅಧಿಕಾರಿ ನಾಗೇಂದ್ರಸ್ವಾಮಿ, ಬೆಂಗಳೂರು ಫಿಲ್ಮ್

ಸೊಸೈಟಿ ಅಧ್ಯಕ್ಷ ಜಾರ್ಜ್ ಕುಟ್ಟಿ, ಚಿಲ್ಡ್ರನ್ಸ್ ಇಂಡಿಯಾ ಅಧ್ಯಕ್ಷ ನಂಜುಂಡೇಗೌಡ ಅವರು ಸದಸ್ಯರಾಗಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಸಂಘಟನಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದಾರೆ.

ಚಲನ ಚಿತ್ರೋತ್ಸವದ ಕೋರ್ ಕಮಿಟಿಯನ್ನು ಸಹ ರಚಿಸಿ ಸರ್ಕಾರ ಆದೇಶ ಹೊರಡಿಸಿದೆ. ಈ ಸಮಿತಿಯಲ್ಲಿ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿಗಳು, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರು, ಚಲನಚಿತ್ರೋತ್ಸವದ ಕಾರ್ಯಕಾರಿ ನಿರ್ದೇಶಕರಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು, ಮತ್ತೋರ್ವ ಕಲಾತ್ಮಕ ನಿರ್ದೇಶಕರು ಸದಸ್ಯರುಗಳಾಗಿದ್ದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಸಂಘಟನಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದಾರೆ ಎಂದು ರಾಜ್ಯ ಸರ್ಕಾರ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ.

ಬಾಬು:ಜಿಪಿಆರ್.

# BIFFES -2015 CM to lead organizing committee

**Bangalore, September 9:(Karnataka Information)**

**Chief Minister of Karnataka will head the organizing committee of the 8th Bengaluru International Film Festival-2015- BIFFES. Department of Information and Public Relations and Karnataka Chalanachitra Academy will jointly organize the festival.**

**A Government order has been issued in this regard today. Minister for Infrastructure Development, Haj and Information and Public Relations will be the Executive President. Secretary to Government, Kannada, Culture, Information and Public Relations Department, President, Karnataka Chalanachitra Academy, Dr. Jayamala, MLC, Director of Information and Public Relations Department, President, Karnataka Film Chamber of Commerce, Noted Film Director Dr. Girish Kasaravalli, R. P.Sharma, ADGP, Raliways, Karnataka, Actress Kum. Radhika Pandith, Journalist N. Vishakha, Nagendraswamy, Officer, Central Censor Board, George Kutty, President, Bengaluru Film Society, Nanjundegowda, President, Children's India, are the members of the committee and Registrar, Karnataka Chalanachitra Academy will be the Member Secretary.**

## Core Committee:

The Core committee will be headed by the Secretary to Government, Kannada, Culture, Information and Public Relations department. President, Karnataka Chalanachitra Academy, Director of Information and Public Relations Department and Executive Director, Film festival, will be the members of the core committee and Registrar, Karnataka Chalanachitra Academy will be the member secretary.

babu/ap/km

## ಗಾಂಧೀ ಜಯಂತಿ ಪ್ರಯುಕ್ತ ವಾರ್ತಾಸೌಧದಲ್ಲಿ ಶ್ರಮದಾನ

ಬೆಂಗಳೂರು, ಸೆಪ್ಟೆಂಬರ್ 9 (ಕರ್ನಾಟಕ ವಾರ್ತೆ)

ಬೆಂಗಳೂರು ರಾಜಾಜಿನಗರದ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿಗಳು ಬರುವ ಅಕ್ಟೋಬರ್ 2 ರ ಗಾಂಧೀ ಜಯಂತಿಗೆ ಪೂರಕವಾಗಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸೌಧದಲ್ಲಿ ಸೆಪ್ಟೆಂಬರ್ 12 ರಂದು ಬೆಳಿಗ್ಗೆ 10–30 ಗಂಟೆಯಿಂದ ಶ್ರಮದಾನ ಹಾಗೂ ಗಿಡ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

### ಈ ವಾರದ ಬೆಳ್ಳಿಸಿನಿಮಾ–ಬೆಳ್ಳಿಮಾತು:

## ಮಿನುಗುತಾರೆ ಕಲ್ಪನಾ ಕುರಿತ ಗ್ರಂಥ ಬಿಡುಗಡೆ

ಬೆಂಗಳೂರು, ಸೆಪ್ಟೆಂಬರ್ 9 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ ನಡೆಸುವ ಬೆಳ್ಳಿಸಿನಿಮಾ–ಬೆಳ್ಳಿಮಾತು ಕಾರ್ಯಕ್ರಮದಡಿ ಸೆಪ್ಟೆಂಬರ್ 12 ರ ಶನಿವಾರದಂದು ಬೆಳ್ಳಿ ಸಿನಿಮಾ "ಎರಡು ಕನಸು" ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ಚಿತ್ರದ ನಿರ್ದೇಶಕರಾದ ದೊರೈ ಭಗವಾನ್ ಖ್ಯಾತಿಯ ಭಗವಾನ್ ಅವರಿಂದ ಬೆಳ್ಳಿಮಾತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಸೆಪ್ಟೆಂಬರ್ 12 ರಂದು ಸಂಜೆ 4–00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಈ ಸಮಾರಂಭದಲ್ಲಿ ವಿ. ಶ್ರೀಧರ್ ಅವರು

ರಚಿಸಿರುವ ಕನ್ನಡ ಚಿತ್ರರಂಗದ ಮಿನುಗುತಾರೆ ದಿವಂಗತ ಕಲ್ಪನಾರ ಕುರಿತ "ರಜತ ರಂಗದ ಧ್ರುವತಾರೆ" ಸಂಸ್ಮರಣ ಗ್ರಂಥ ಬಿಡುಗಡೆ ಹಮ್ಮಿಕೊಳ್ಳಲಾಗಿದೆ. ಗ್ರಂಥ ಕುರಿತಂತೆ ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಮಾತನಾಡುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಥಾಮಸ್ ಡಿಸೋಜಾ ಹಾಗೂ ಮಾಜಿ ಸಂಸದ ಮತ್ತು ಸಾಹಿತಿ ಅಡಗೂರು ವಿಶ್ವನಾಥ ಪಾಲ್ಗೊಳ್ಳುವರು ಎಂದು ಹೆಚ್. ಬಿ. ದಿನೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

## ಕುಲಪತಿ ನೇಮಕ

**ಬೆಂಗಳೂರು, ಸೆಪ್ಟೆಂಬರ್ 9 (ಕರ್ನಾಟಕ ವಾರ್ತೆ)**

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳನ್ನಾಗಿ ಡಾ ಮಲ್ಲಿಕಾ ಎಸ್. ಘಂಟಿ ಅವರನ್ನು ನೇಮಿಸಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

## ಸೆಪ್ಟೆಂಬರ್ 10ರಂದು ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆ

ಬೆಂಗಳೂರು, ಸೆಪ್ಟೆಂಬರ್ 9 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ರೈತರ, ವಿಧ್ಯಾರ್ಥಿಗಳ ಹಾಗೂ ಯುವಜನರ ಆತ್ಮಹತ್ಯಾ ಪ್ರಕರಣಗಳ ಹಿನ್ನಲೆಯಲ್ಲಿ, ಜನಜಾಗೃತಿ ಮೂಡಿಸಲು, ವಿಶ್ವ ಆತ್ಮಹತ್ಯೆ ತಡೆ ದಿನದಂದು (ದಿನಾಂಕ 10-09-2015 ರ ಗುರುವಾರ) ಹೊಸೂರು ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಕಾಲಜಿ & ರಿಸರ್ಚ್ ವತಿಯಿಂದ ಬೆಳಿಗ್ಗೆ 10.30ರಿಂದ ಸಂಸ್ಥೆಯ ಸುತ್ತಮುತ್ತಲಿನ ಪ್ರದೇಶದಲ್ಲಿ, ಭಿತ್ತಿಚಿತ್ರ ಪ್ರದರ್ಶನ, ಸಹಾಯವಾಣಿ, ಸಲಹೆ- ಸಮಾಲೋಚನೆ ಇನ್ನಿತರ ವಿವರಗಳನ್ನುಳ್ಳ ಹಸ್ತಪ್ರತಿಗಳನ್ನು ಹಂಚಲಾಗುವುದು ಎಂದು ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ- 080-41217484, 7760052618 ನ್ನು ಸಂಪರ್ಕಿಸಬಹುದು.

ಪಲ್ಲವಿ

## ಬೆಳ್ಳಿ ಹೆಜ್ಜೆ – ಈ ಬಾರಿ ಎಂ. ಎನ್. ಕುಮಾರ್

**ಬೆಂಗಳೂರು, ಸೆಪ್ಟೆಂಬರ್ 9 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿಯು ನಡೆಸಿಕೊಡುವ ಕನ್ನಡ ಚಲನಚಿತ್ರರಂಗದ ದಿವ್ಯ ಚೇತನಗಳೊಡನೆ ನಡೆಸುವ ಬೆಳ್ಳಿಹೆಜ್ಜೆ ಕಾರ್ಯಕ್ರಮದಲ್ಲಿ ಈ ಬಾರಿ ಮೂವತ್ತೈದು ಹೆಚ್ಚು ಚಿತ್ರಗಳ ನಿರ್ಮಾತೃ

ಎಂ.ಎನ್. ಕುಮಾರ್ ಅವರೊಂದಿಗೆ ಮುಖಾಮುಖಿ ನಡೆಯಲಿದೆ  ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರಿನ ಕುಮಾರಪಾರ್ಕ್ ರಸ್ತೆಯ ಗಾಂಧೀ ಭವನದಲ್ಲಿರುವ ಮಹದೇವ ದೇಸಾಯಿ ಸಭಾಂಗಣದಲ್ಲಿ  ಸೆಪ್ಟೆಂಬರ್ 11 ರಂದು ಸಂಜೆ 5-00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಮುಖ್ಯ ಅತಿಥಿಗಳಾಗಿ ಕನ್ನಡ ಚಲನಚಿತ್ರರಂಗದ ಹಿರಿಯ ನಟ ದೇವರಾಜ್, ಚಲನಚಿತ್ರ ನಿರ್ದೇಶಕರು ಹಾಗೂ ಪತ್ರಕರ್ತರಾದ ಇಂದ್ರಜಿತ್ ಲಂಕೇಶ್ ಪಾಲ್ಗೊಳ್ಳುವರು ಹಾಗೂ ವಿಶೇಷ ಆಹ್ವಾನಿತರಾಗಿ ಕರ್ನಾಟಕ ಚಲನ ವಾಣಿಜ್ಯ ಮಂಡಳಿಯ ಅಧ್ಯಕ್ಷ ಥಾಮಸ್ ಡಿಸೋಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರು ಆಗಮಿಸುವರು ಎಂದು ಹೆಚ್. ಬಿ. ದಿನೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುಮಪ ಸಾಧಕ – ಎಂ.ಎನ್. ಕುಮಾರ್ ಕುರಿತಂತೆ ..............................

35 ಕ್ಕೂ ಹೆಚ್ಚು ಚಿತ್ರಗಳ ನಿರ್ಮಾಣ – 160 ಕ್ಕೂ ಹೆಚ್ಚು ಚಿತ್ರಗಳ ವಿತರಣೆ – ಪ್ರದರ್ಶಕರ ವಿಭಾಗದಲ್ಲಿ ಮೇಲುಗೈ – ಸಾಕಲ್ಲ  ಸಾಧಕರೊಬ್ಬರ ಸಾಧನೆ ದಾಖಲಿಸಲು. ತುಂಬ ಸಂಕೀರ್ಣವಾದ ಚಲನಚಿಗತ್ರ ನಿರ್ಮಾಣ, ಅಪಾರ ತಾಳ್ಮೆ – ಲೆಕ್ಕಾಚಾರ – ಮುಂದಾಲೋಚನೆ – ಚಿತ್ರರಂಗದ ಕುರಿತ ತಿಳುವಳಿಕೆ – ಎಲ್ಲಕ್ಕಿಂತ ಮಿಗಿಲಾಗಿ ದೃಶ್ಯಲೋಕದಲ್ಲಿ ಅದೃಶ್ಯವಾಗಿಯೇ ಅದೃಷ್ಟ ಅರಸುವ ಎದೆಗಾರಿಕೆಯನ್ನು ಬೇಡುವಂತಹುದು. ಇಲ್ಲಿ ಅಪರಾ ಜ್ಞಾನ ಬೇಕು. ಅಸೀಮ ಸಾಹಸಿಯೂ ಆಗಿರಬೇಕು. ಎಂ>ಎನ್. ಕುಮಾರ್ ಇಂತಹ ಸಾಹಸಿ.

ಬಟ್ಟೆ ಅಂಗಡಿಯಲ್ಲಿ ಸಹಾಯಕವಾಗಿ ವೃತ್ತಿ ಬದುಕು ಆರಂಭಿಸಿ "ಶ್ರೀ ಲಕ್ಷ್ಮಿ ಫಿಲಂಸ್" ಎನ್ನುವ ಪ್ರತಿಷ್ಠಿತ ಚಲನಚಿತ್ರ ಸಂಸ್ಥೆಯನ್ನು ಕಟ್ಟುವವರೆಗೆ, 7 ನೇ ತರಗತಿ ಉತ್ತೀರ್ಣರಾದ ಕುಮಾರ್ ಕ್ರಮಿಸಿದ ಹಾದಿ ನಿಶ್ಚಯವಾಗಿಯೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಆಪೇಕ್ಷಣೀಯ ಪಠ್ಯವಾಗಬಹುದು. ಮಂಡ್ಯದ ಹಳ್ಳಿ ಸೀಮೆಯ ಮಹದೇವಮ್ಮ – ನಂಜಪ್ಪ ದಂಪತಿಯ ಈ ಪುತ್ರ ತಮ್ಮ 25 ನೇ ವಯಸ್ಸಿಗೆ ಚಿತ್ರ ನಿರ್ಮಾಣ ಪ್ರಾರಂಭಿಸಿದರು. 30ನೇಯ ವಯಸ್ಸಿಗೆ "ಶ್ರೀ ಲಕ್ಷ್ಮಿ ಫಿಲಂಸ್" ಹುಟ್ಟು ಹಾಕಿದವರು. 35 ವರ್ಷಗಳ ಕಾಲ ಚಿತ್ರೋದ್ಯಮವೆಂಬ ಸಾಗರದಲ್ಲಿ ಈಜುತ್ತಾ ಕನ್ನಡ ಚಿತ್ರರಂಗ ಕಟ್ಟಿದವರು. ಮುಳುಗುವಂತಾದಾಗಲೂ ಮೈ ಕೊಡವಿ ಎದ್ದು ಬಂದು ಜಯಸಾಧಿಸಿದವರು. ಮತ್ತೆ ಮತ್ತೆ ಕನ್ನಡದ ಕೆಲಸಕ್ಕೆ ಮನಗೊಟ್ಟವರು. ತಮ್ಮ ಜೊತೆಯಲ್ಲಿಯೇ ಸಂಗೀತ ನಿರ್ದೇಶಕ ಎಂ.ಎನ್. ಕೀರ್ವಾಣಿ. ನಿರ್ದೇಶರುಗಳಾದ ಹೆಚ್. ಮಹೇಶ್, ವಾಸು, ಎಂ.ಎಸ್. ರಮೇಶ್, ಮಹೇಶ್ ಬಾಬು ಮೊದಲಾದವರ ಬೆಳವಣಿಗೆಗೆ ಮೆಟ್ಟಿಲಾದವರು.

'ಅಶೋಕ ಚಕ್ರ', 'ಭೈರವ', 'ಮೋಜುಗಾರ  – ಸೊಗಸುಗಾರ', 'ಅಳೀಮಯ್ಯ' ' ಪೋಲೀಸ್ ಬೆಲ್ಟ್' 'ಮಾಣಿಕ್ಯ' ಮೊದಲಾದ 30 ಕ್ಕೂ ಹೆಚ್ಚು ಚಿತ್ರಗಳ ನಿರ್ಮಾಪಕ ಎಂ.ಎಂ. ಕುಮಾರ್, ಛಲದಂಕ ಮಲ್ಲ. ಕನ್ನಡ ಚಿತ್ರಗಳ ಇತಿ–ಮಿತಿಯ ಕುರಿತು. ಅನ್ಯಭಾಷಾ ಚಿತ್ರಗಳನ್ನೆದುರಿಸಬೇಕಾದ ಕನ್ನಡದ ಸವಾಲಿನ ಕುರಿತು. ಕನ್ನಡದ

ಸಿನಿಮಾಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಶ್ರೀ ಎಂ.ಎನ್. ಕುಮಾರ್ ಸೋಲಿಗೆ ಎದೆಯೊಡ್ಡಿಯೂ ಜಯವನ್ನೊಲಿಸಿಕೊಂಡ ಅಸೀಮ ಸಾಹಸಿ.

ಪಲ್ಲವಿ:ಬಾಬು:ಜಿಪಿಆರ್.